# ಹ್ಯಾಪಿ ಬರ್ತ್‌ಡೇ 60 ಶಿವಣ್ಣ!



**‘ವಯಸ್ಸು ಅನ್ನೋದೊಂದು ಸಂಖ್ಯೆಯಷ್ಟೆ’ ಎಂಬ ಮಾತು ಶಿವರಾಜ್‌ಕುಮಾರ್ ಅವರನ್ನು ನೋಡಿಯೇ ಹುಟ್ಟಿದಂತಿದೆ. ಅರವತ್ತರ ಮೆಟ್ಟಿಲ ಮೇಲೆ ನಿಂತು ತಾರುಣ್ಯದ ಚೈತನ್ಯವನ್ನು ಉಳಿಸಿಕೊಂಡಿರುವ ಅವರು ಇಂದು ಕನ್ನಡದ ಅತ್ಯಂತ ಬೇಡಿಕೆಯ ನಟನೂ ಹೌದು.**

ಕೆಲವರ್ಷಗಳ ಹಿಂದೆ ಶಿವರಾಜ್‌ಕುಮಾರ್ ಒಂದು ಕಿರುತೆರೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರ ಇಡೀ ಬದುಕನ್ನು ಅವಲೋಕನ ಮಾಡುವ ಆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪುನೀತ್ ರಾಜ್‌ಕುಮಾರ್ ಕೂಡ ಬಂದಿದ್ದರು. ‘ಶಿವಣ್ಣನಲ್ಲಿ ನೀವು ಇಷ್ಟಪಡದ ಗುಣ ಯಾವುದು?’ ಎಂದು ಕೇಳಿದಾಗ ತುಸು ತಡೆದು ಅಪ್ಪು ಕೊಟ್ಟ ಉತ್ತರ ಹೀಗಿತ್ತು: ಅವರು ತಮಗೆ ಬಂದ ಎಲ್ಲ ಸಿನಿಮಾಗಳನ್ನೂ ಒಪ್ಪಿಕೊಳ್ತಾರೆ!

ಆ ಮಾತಿಗೆ ಶಿವಣ್ಣನೂ ಸೇರಿದ ಹಾಗೆ ಅಲ್ಲಿದ್ದವರೆಲ್ಲರೂ ನಕ್ಕಿದ್ದರು. ಹಾಗೆ ತುಸು ಹಗುರವಾಗಿಯೇ ಕಳೆದುಹೋಗಿದ್ದ ಆ ಮಾತುಕತೆಯನ್ನು ಈಗ, ಶಿವಣ್ಣ ತಮ್ಮ ಬದುಕಿನ 60ನೇ ಮೆಟ್ಟಿಲು ಹತ್ತಿ ನಿಂತಿರುವ ಸಂದರ್ಭದಲ್ಲಿ ನೆನಪಿಸಿಕೊಂಡರೆ ವಿಸ್ಮಯ, ವಿಷಾದದ ಜೊತೆಗೆ ಪ್ರಶ್ನೆಗಳು ಮನಸ್ಸಿನಲ್ಲಿ ಮುತ್ತಿಕೊಳ್ಳುತ್ತವೆ. ಅವತ್ತು ಶಿವಣ್ಣನ ಕುರಿತು ಪ್ರೀತಿ, ಕಾಳಜಿಯಿಂದಲೇ ಹಾಗೆ ಹೇಳಿದ ಅಪ್ಪು ಇಂದು ನಮ್ಮ ನಡುವೆ ಇಲ್ಲ. ಇಡೀ ಚಿತ್ರರಂಗವೇ ಸಂಭ್ರಮದಿಂದ ಆಚರಿಸಬೇಕಾಗಿದ್ದ ಶಿವಣ್ಣನ 60ನೇ ಹುಟ್ಟುಹಬ್ಬ ಪುನೀತ್ ಅಗಲಿಕೆಯ ಸೂತಕದಲ್ಲಿ ಕಳೆದುಹೋಗಿದೆ.

‘ಬಂದ ಸಿನಿಮಾಗಳನ್ನೆಲ್ಲ ಒಪ್ಪಿಕೊಳ್ಳುತ್ತಾರೆ’ ಎಂಬ ಪುನೀತ್ ಮಾತು ಅತಿಶಯೋಕ್ತಿಯೇನೂ ಅಲ್ಲ ಎಂಬುದು ಶಿವಣ್ಣನ ಸಿನಿಮಾಗ್ರಾಫ್ ನೋಡಿದರೇ ತಿಳಿಯುತ್ತದೆ. ಬಹುಶಃ ಈಗ ಕನ್ನಡದಲ್ಲಿ ಅತಿ ಹೆಚ್ಚು ಸಿನಿಮಾಗಳನ್ನು ಒಪ್ಪಿಕೊಂಡಿರುವ ನಾಯಕನಟ ಶಿವರಾಜ್‌ಕುಮಾರ್. ಘೋಷಣೆಯಾಗಿರುವ ಸಿನಿಮಾಗಳೇ ಎಂಟರ ಮೇಲಿವೆ. ಮಾತುಕತೆಯ ಹಂತದಲ್ಲಿರುವನ್ನು ಲೆಕ್ಕ ಹಾಕಿದರೆ ಎರಡೂ ಕೈಗಳ ಬೆರಳುಗಳು ಸಾಲಲಿಕ್ಕಿಲ್ಲ. ‘ವೇದ’ ಅವರ 125ನೇ ಸಿನಿಮಾ!

ಕನ್ನಡದ ಸ್ಟಾರ್ ಸಿನಿಮಾಗಳೆಲ್ಲ ಲೆಕ್ಕ ಹಾಕಿ, ಅಳೆದು ಸುರಿದು ಎರಡು ಮೂರು ವರ್ಷಕ್ಕೊಂದು ಸಿನಿಮಾಗಳನ್ನು ಒಪ್ಪಿಕೊಂಡು, ಕೊನೆಗೆ ಹಾಗೆ ಒಪ್ಪಿಕೊಂಡಿದ್ದರಲ್ಲಿಯೂ ಅರ್ಧಕ್ಕರ್ಧ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಟುಸ್‌ಪಟಾಕಿಯಾಗುತ್ತಿರುವಾಗ ಶಿವಣ್ಣ ಮಾತ್ರ ಒಂದರ ಹಿಂದೆ ಇನ್ನೊಂದರಂತೆ ಸಿನಿಮಾಗಳಲ್ಲಿ ನಟಿಸುತ್ತಲೇ ಹೋದರು. ಹೀಗೆ ಸಿಕ್ಕ ಸಿನಿಮಾಗಳೆಲ್ಲ ಒಪ್ಪಿಕೊಳ್ಳುತ್ತಲೇ ಹೋಗುವ ಅಗತ್ಯ ಏನಿತ್ತು ಎಂದು ಕೇಳಬಹುದು. ಆದರೆ ಆ ಪ್ರಶ್ನೆ ಕೇಳುವ ಮುನ್ನ ಶಿವಣ್ಣ ಅವರ ಸಿನಿಮಾಗಳ ಗ್ರಾಫ್‌ನತ್ತ ಒಮ್ಮೆ ಕಣ್ಣಾಡಿಸಬೇಕು.

ಕನ್ನಡದಲ್ಲಿ ರಾಜ್‌ಕುಮಾರ್ ಅವರನ್ನು ಬಿಟ್ಟರೆ ಇಷ್ಟೊಂದು ವೈವಿಧ್ಯದ ಪಾತ್ರಗಳು, ಕಥೆಗಳಲ್ಲಿ, ನೋಟಗಳಲ್ಲಿ ನಟಿಸಿದ ಇನ್ನೊಬ್ಬ ನಟ ಎಂದರೆ ಅದು ಶಿವರಾಜ್‌ಕುಮಾರ್. ಅಳೆದು ತೂಗಿ ಲೆಕ್ಕ ಹಾಕಿ ಸಿನಿಮಾ ಒಪ್ಪಿಕೊಳ್ಳುತ್ತಿರುವ ಯಾವ ಸ್ಟಾರ್ ನಟರ ವೃತ್ತಿಜೀವನದಲ್ಲಿಯೂ ಇಷ್ಟೊಂದು ಪಾತ್ರವೈವಿಧ್ಯ, ಪ್ರಕಾರಗಳ ವೈವಿಧ್ಯ, ನಟನೆಯ ವೈವಿಧ್ಯಗಳನ್ನು ಕಾಣಲು ಸಾಧ್ಯವೇ ಇಲ್ಲ.

1974ರಲ್ಲಿ ರಾಜ್ ಅಭಿನಯದ ‘ಶ್ರೀನಿವಾಸ ಕಲ್ಯಾಣ’ದಲ್ಲಿ, ಅವರ ಹಿರಿಮಗ ಮಾಸ್ಟರ್ ಪುಟ್ಟಸ್ವಾಮಿ ಕಾಣಿಸಿಕೊಂಡಾಗ ಜನರೇನೂ ಆ ಹುಡುಗನನ್ನು ‘ಹೀರೊ’ ಆಗಿ ಕಲ್ಪಿಸಿಕೊಂಡಿರಲಿಲ್ಲ. ಅದಾಗಿ ಹನ್ನೆರಡು ವರ್ಷಗಳ ನಂತರ ಖ್ಯಾತ ನಿರ್ದೇಶಕ ಸಿಂಗೀತಂ ಶ್ರೀನಿವಾಸ್ ರಾವ್ ಅವರ ‘ಆನಂದ್’, ಸಿನಿಮಾದಲ್ಲಿ ಹಗುರ ಕೂದಲನ್ನು ಗಾಳಿಗೆ ಹಾರಲುಬಿಟ್ಟ, ನಸುಗಪ್ಪು ಬಣ್ಣದ ಶಿವರಾಜ್‌ಕುಮಾರ್ ಎಂಬ ಹುಡುಗ ತೆರೆಯ ಮೇಲೆ ಕಾಣಿಸಿಕೊಂಡಾಗ ಜನರೇನೋ ಪ್ರೀತಿಯಿಂದಲೇ ಬರಮಾಡಿಕೊಂಡರು. ಆದರೆ ಅಂದಿನ ಸಿನಿಮಾ ವಿಶ್ಲೇಷಕರಿಗೆ ಶಿವಣ್ಣನ ಕನ್ನಡ ಕಸಿವಿಸಿ ಹುಟ್ಟಿಸಿತ್ತು. ನಟನೆಯಲ್ಲಿಯೂ ಅಪ್ಪನ ಪ್ರಭೆಯಲ್ಲಿ ನಿಲ್ಲಿಸಿ ಮೂಗು ಮುರಿದವರೂ ಕಮ್ಮಿಯಿರಲಿಲ್ಲ. ಆದರೆ ಕನ್ನಡಿಗರು ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ರಾಜಣ್ಣನ ಹಿರಿಮಗನನ್ನು